ಬಿ.ಎ. ಬಿ.ಎಸ್.ಸಿ. ಮತ್ತು ಬಿ.ಕಾಂ. ಮೊದಲನೇ ವಾರ್ಷಿಕ ಪರೀಕ್ಷೆಗಳು ಕಾಲೇಜುಗಳಿಂದ ನಿರ್ವಹಣೆ.

128. ಶ್ರೀ ರಾಮಲಿಂಗರೆಡ್ಡಿ (ಜಯನಗರ):– ಮಾನ್ಯ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಬಿ.ಎ., ಬಿ.ಎಸ್.ಸಿ. ಮತ್ತು ಬಿ.ಕಾಂ. ಮೊದಲನೇ ವಾರ್ಷಿಕ ಪರೀಕ್ಷೆಗಳನ್ನು ನಡೆಸುವ ಕಾರ್ಯವನ್ನು ಕಾಲೇಜುಗಳಿಗೇ ವಹಿಸಲು ಬೆಂಗಳೂರು ವಿಶ್ವವಿದ್ಯಾಲಯ ತೀರ್ಮಾನಿಸಿರುವುದು ವಾಸ್ತವಾಂಶವೇ ?

2) ಹಾಗಿದ್ದಲ್ಲಿ ರಾಜ್ಯದ ಇತರೆ ವಿಶ್ವವಿದ್ಯಾಲಯಗಳಲ್ಲಿ ಈ ಪದ್ಧತಿ ಪ್ರಚಲಿತದಲ್ಲಿದೆಯೇ ?

3) ಬಿ.ಎ., ಬಿ.ಎಸ್.ಸಿ. ಮತ್ತು ಬಿ.ಕಾಂ ಮೊದಲನೇ ವಾರ್ಷಿಕ ಪರೀಕ್ಷೆಗಳನ್ನು ಸಹ ನಡೆಸುವಂತೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೂಚಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ ?

4) ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ಉಪಾಧ್ಯಾಯರುಗಳಿಗೆ ಅನ್ಯಾಯವಾಗುವುದಿಲ್ಲವೇ ?

ಶ್ರೀ ಎಸ್.ಎಂ. ಯಾಹ್ಯಾ (ಶಿಕ್ಷಣ ಮತ್ತು ವಕ್ಫ್ ಸಚಿವರು):–

1) ದಿನಾಂಕ 2–11–92ರ ಬೆಂಗಳೂರು ವಿಶ್ವವಿದ್ಯಾಲಯದ ಅಧಿಸೂಚನೆಯಲ್ಲಿ 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 12 (5) ನೇ ಪ್ರಕರಣದಲ್ಲಿ ನಿಹಿತವಾದ ಅಧಿಕಾರಗಳನ್ನು ಚಲಾಯಿಸಿ ಉಪಕುಲಪತಿಗಳ ಅನುಮೋದನೆ ಪಡೆದು ಬಿಎ: ಬಿಎಸ್ಸಿ: ಬಿಕಾಂ ಮೊದಲನೆ ವಾರ್ಷಿಕ ಪರೀಕ್ಷೆಗಳನ್ನು ಅನುಕ್ರಮವಾಗಿ ಕಾಲೇಜಿನ ಮಟ್ಟದಲ್ಲೇ ನಡೆಸಲು ರೆಗ್ಯುಲೇಷನ್‌ನ್ನು ತಿದ್ದುಪಡಿ ಮಾಡಲಾಗಿತ್ತು.

2) ಇಲ್ಲ.

3) ಮೇಲ್ಕಂಡ ಅಧಿಸೂಚನೆಯನ್ನು ಅಬೆಯನ್ಸ್‌ನಲ್ಲಿ ಇಡಲಾಗಿದ್ದು ಕಾಲೇಜು ಮಟ್ಟದಲ್ಲಿ ಪರೀಕ್ಷೆಗಳನ್ನು ನಡೆಸುವ ಪ್ರಸ್ತಾಪವನ್ನು ಮುಂದೂಡಲಾಗಿದೆ.

4) ಉದ್ಭವಿಸುವುದಿಲ್ಲ.

ಹುಲಿಯೂರಿನಲ್ಲಿ ಬಸ್ ನಿಲ್ದಾಣದ ಅವಶ್ಯಕತೆ.

602. ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳ್ಳಂಬೆಳ್ಳ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳದಲ್ಲಿ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಲಿಯೂರಿನಲ್ಲಿ ಬಸ್ ನಿಲ್ದಾಣದ ಅವಶ್ಯಕತೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಎರಡು ಸ್ಥಳಗಳಲ್ಲಿ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಮಂಜೂರಾತಿ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಹೌದು.

ಆ) ಬಸ್ ನಿಲ್ದಾಣ ಕಟ್ಟಲು ಸರಿಯಾದ ನಿವೇಶನಗಳು ದೊರಕಿರುವುದಿಲ್ಲ.

ಪಡಿತರ ಚೀಟಿಗಳನ್ನು ಹಂಚುವ ಬಗ್ಗೆ.

603. ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸದಾಗಿ ಪಡಿತರ ಚೀಟಿಗಳನ್ನು ಹಂಚುವ ಕಾರ್ಯಕ್ರಮವು 2–3ವರ್ಷಗಳಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅದಕ್ಕೆ ವಿಳಂಬವಾಗಲು ಕಾರಣವೇನು ಮತ್ತು ಅದನ್ನು ತಪ್ಪಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಇ) ಮೂರು ತಾಲ್ಲೂಕುಗಳನ್ನೊಳಗೊಂಡ ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಕೇಸರಿ ಪಡಿತರ ಚೀಟಿಯನ್ನು ಪಡೆದಿರುವ ಅರ್ಹ ಜನರೆಷ್ಟು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವೆಯರು):–

ಅ) ಸರ್ಕಾರದ ಆದೇಶ ಸಂಖ್ಯೆ: ಎಫ್‌ಟಿಡಿ 57ಡಿಆರ್‌ಎ 90 ದಿನಾಂಕ 26.10.91ರಲ್ಲಿ ತ್ರಿವರ್ಣ ಪಡಿತರ ಚೀಟಿಗಳ ಸಮೀಕ್ಷೆ ಮತ್ತು ಹೊಸದಾಗಿ ಪಡಿತರ ಚೀಟಿಗಳನ್ನು ನೀಡುವ ಬಗ್ಗೆ ಆದೇಶಿಸಲಾಗಿತ್ತು. ಇದನ್ನು ಕಾರ್ಯಗತಗೊಳಿಸುವುದರಲ್ಲಿ ಸ್ವಲ್ಪ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕಂದಾಯ ಇಲಾಖೆಯ ನೌಕರರು ತ್ರಿವರ್ಣ ಪಡಿತರ ಚೀಟಿಯ ಪುನರ್ ಸಮೀಕ್ಷೆ ಮತ್ತು ಹೊಸದಾಗಿ ಪಡಿತರ ಚೀಟಿಗಳನ್ನು ನೀಡುವ ಬಗ್ಗೆ ಅಸಹಕಾರ ತೋರಿದ್ದರಿಂದ ಸಮೀಕ್ಷೆ ಮತ್ತು ಪಡಿತರ ಚೀಟಿಯ ವಿತರಣೆ ಕಾರ್ಯವು ಸ್ವಲ್ಪ ಕುಂಠಿತಗೊಂಡಿದೆ. ಈ ಬಗ್ಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಕಂದಾಯ ಇಲಾಖೆಯ ನೌಕರರು ಪಡಿತರ ಚೀಟಿ ಸಮೀಕ್ಷೆ ಕಾರ್ಯ ಹಾಗೂ ವಿತರಣೆಯಲ್ಲಿ ಅಸಹಕಾರ ತೋರಿಸಿದಲ್ಲಿ ಅಂತಹ ಸ್ಥಳಗಳಲ್ಲಿ ಶಾಲಾ ಶಿಕ್ಷಕರನ್ನು ನೇಮಿಸಿಕೊಂಡು ಸಮೀಕ್ಷೆ ಮತ್ತು ಪಡಿತರ ಚೀಟಿ ವಿತರಣೆ ಕಾರ್ಯವನ್ನು ಕೈಗೊಳ್ಳಲು ಸೂಚಿಸಲಾಗಿದೆ.

ಇ) 17,011

Issue of Ration Cards at Srirangapatna

601. Smt. Damayanti Boregowda, (Srirangapatna):– Will the Minister for Food and Civil Supplies be pleased to state?

a) The time required by the Government to issue ration cards to those who don't have the cards at Srirangapatna;

b) The reasons for the delay;

SMT. MANORAMA MADHWARAJ (Minister for Food and Civil Supplies):–